## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.



ಉಡುಪಿ ಜಿಲ್ಲೆ ಕೋಟದಲ್ಲಿರುವ ಡಾ. ಶಿವರಾಮ ಕಾರಂತ ಥೀಮ್ ಪಾರ್ಕ್

ಒಂಚೂರು ಹೊರ್ಳಿ ಸಾರ್ ಕೊಡ್ತೆ. ತಕ ಹೋಗಕಾ' ಎಂದಾಗ ಖುಷಿಯಿಂದ ಅವಳ ಬಾಯಿ ಇಷ್ಟಗಲವಾಯಿತು. ಅಷ್ಟರಲ್ಲಿ ಅವಳ ಜೊತೆಗೆ ಬಂದಿದ್ದ ಮೌನಗೌರಿ ಬಚ್ಚಿ 'ಹೆಣಾ, ನೀ ಕಾಯಿ ಹೆಕ್ಕೂಕ್ ಬಂದದ್ದಾ, ಇಲ್ಲಾ ಅಮ್ಮನ ಕೂಡ ಪಂಚಾಯ್ತಿ ಮಾಡೂಕ್ ಬಂದದ್ದಾ? ಆ ಕಣ್ ಹೆಡ್ಗಿ ತಕಂಬಾ. ಕಡೀಕಿ ಮಳಿಗಿಳಿ ಸುರುವಾರ ಅದೊಂದ್ ರಗ್ಳಿ ಬೇಕಾ?' ಎಂದು ಅವಳನ್ನು ಎಚ್ಚರಿಸಿದಾಗ ಕಾಯಿ ಹೆಕ್ಕಲು ಹೆಡಿಗೆ ಎತ್ತಿಕೊಂಡು ಹೊರಟಳು ನಮ್ಮ ಲಚ್ಚಿ. ನಾನು ಅವರಿಬ್ಬರಿಗೆ ಚಾ ತಿಂಡಿ ಮಾಡಲು ಅಡುಗೆ ಮನೆಯತ್ತ ಹೆಜ್ಜೆ ಹಾಕಿದೆ.

ಇದು ನನ್ನ ಮತ್ತು ನಮ್ಮ ತೋಟದ ಕೆಲಸದ ಲಚ್ಚಿಯ ನಡುವಿನ ಆತ್ಮೀಯ ಸಂಭಾಷಣೆ. ಇದು ನಮ್ಮ ಕೋಟಕುಂದಾಪ್ರ ಕನ್ನಡ ಭಾಷೆ. ಕೇಳಲು ರಸವತ್ತಾದ ಈ ಕುಂದಾಪ್ರ ಕನ್ನಡ ಭಾಷೆ ಹೊಸಬರಿಗೆ ಮಾತನಾಡುವುದಿರಲಿ, ಸುಲಭದಲ್ಲಿ ಅರ್ಥ ಮಾಡಿಕೊಳ್ಳುವುದೂ ಕಷ್ಟವೇ. ನಾನು ಮೂಲತಃ ಕರಾವಳಿಯವಳೇ ಆದರೂ ಬೆಳೆದಿದ್ದು ಉತ್ತರ ಕರ್ನಾಟಕದಲ್ಲಿ. ಹೀಗಾಗಿ ಈ ಊರಿಗೆ ಮದುವೆಯಾಗಿ ಬಂದಾಗ ಇವರೇನು ಮಾತನಾಡುತ್ತಿದ್ದಾರೆ ಎಂದು ಅರ್ಥ ಮಾಡಿಕೊಳ್ಳುವುದೇ ಕಷ್ಟವಾಗುತ್ತಿತ್ತು.

ಮದುವೆಯಾದ ಹೊಸತರಲ್ಲಿ ಒಮ್ಮೆ ನಮ್ಮೆಜಮಾನರು 'ನಾ ಗಂಟಿ ಹೆರಗ್ ಕಟ್ಟಿ ಬತ್ತೆ. ನೀ ಚಾ ಮಾಡಿಡು' ಎಂದರು. ನಾನು 'ಗಂಟೆ ದೇವಸ್ಥಾನದಲ್ಲಿ ಕಟ್ಟುತ್ತಾರಲ್ಲ. ಇವರು ಅದನ್ನು ಎಲ್ಲಿ ಕಟ್ಟಿ ಬರ್ತಾರಂತೆ?' ಎಂದು ನನ್ನ ದೊಡ್ಡತ್ತೆಗೆ ಕೇಳಿದೆ. 'ಅದು ಗಂಟೆಯಲ್ಲ ಗಂಟಿ. ಗಂಟಿ ಅಂದ್ರೆ ದನ' ಎಂದು ತಿಳಿಹೇಳಿದರು. 'ಅವನಿಗೆ ಚಹಾ ಮಾಡಿಡು. ಅವ ಚಪ್ಪೆ ಚಾ ಕುಡೂದು' ಎಂದು ನನ್ನ ದೊಡ್ಡತ್ತೆ ಹೇಳಿದಾಗ ನಾನು 'ಉತ್ತರ ಕರ್ನಾಟಕದಲ್ಲಿ ಬೆಳೆದ ನಾನು ಒಂದು ಲೋಟ ಚಹಾಕ್ಕೆ ಎರಡು ಚಮಚ ಸಕ್ಕರೆ ಹಾಕಿಕೊಂಡು ಕುಡೀತೀನಿ. ಇವರು ನೋಡಿದ್ರೆ ಚಪ್ಪೆ ಚಾ ಕುಡೀತಾರಂತೆ' ಅಂತ ಮನದಲ್ಲೇ ಅಂದುಕೊಂಡು ಒಂದು ಲೋಟ ಶುಗರ್‌ಲೆಸ್ ಚಹಾ ಮಾಡಿಟ್ಟೆ. ನನ್ನವರು ತೋಟದಲ್ಲಿ ದನ ಕಟ್ಟಿ ಬಂದು ನಾ ಕೊಟ್ಟ ಚಹಾ ಕುಡಿದು 'ಇದೆಂತಾ ಮಾರ್‍ಯೈತಿ? ಚಾಗೆ ಸಕ್ರೆ ಹಾಕಲ್ಯಾ? ನಂಗಿನ್ನೂ ಸಕ್ರೆ ಕಾಯಿಲೆ ಬರಲ್ಯೇ' ಎಂದು ನಗೆಯಾಡಿದರು. 'ನೀವು ಚಪ್ಪೆ ಚಹಾ ಕುಡಿಯುವುದು ಅಂತ ದೊಡ್ಡತ್ತೆ ಹೇಳಿದರು' ಎಂದು ನಾನು ಮೆಲ್ಲಗೆ ಉಸುರಿದೆ. 'ಚಪ್ಪೆ ಚಾ ಅಂದ್ರೆ ತಣ್ಣಗಿನ ಚಹಾ. ನಂಗ್ ಬಿಸಿ ಕುಡಿಯೋ ಅಭ್ಯಾಸ ಇಲ್ಲ' ಅಂದರು.

ಅದೊಂದು ದಿನ ಸಂಜೆ 'ಆಟಕ್ ಹೋಪ್ಪೋ ಬತ್ತಿಯಾ?' ಎಂದು ನನ್ನವರು ಕೇಳಿದಾಗ ನನಗೆ ಅಚ್ಚರಿ. 'ಇದೆಂತಾ ಇಷ್ಟು ದೊಡ್ಡವರಾದ ಮೇಲೆ ಆಟ ಆಡೂದಾ? ಈ ಹಳ್ಳಿ ಊರಲ್ಲಿ ಏನ್ ಆಟ ಆಡ್ತಾರೆ? ಕ್ರಿಕೆಟ್? ಫುಟ್‌ಬಾಲ್?' ಎಂದು ಮುಗ್ಧವಾಗಿ ಕೇಳಿದೆ. 'ಹಣೆಹಣೆ ಬಡ್ಕಂಡ್ಕ್ ನಿನ್ ಕಟ್ಕಂಡು. ಅದು ಆಡು ಆಟ ಅಲ್ಲ ಮಾರ್‍ಯೈತಿ ನೋಡು ಆಟ. ನಮ್ಮಲ್ಲಿ ಆಟ ಅಂದ್ರೆ ಯಕ್ಷಗಾನ' ಎಂದಾಗ ನಾನು ಬಿದ್ದು ಬಿದ್ದು ನಕ್ಕಿದ್ದೆ.



ನೀರ್ ದೋಸೆ



ಬನ್ಸ್

ಇಲ್ಲಿನ ಕೆಲವು ವಿಶಿಷ್ಟ ಪದಗಳು ಇಂತಿವೆ.

ಅಬ್ಬಿ–ಅಮ್ಮ, ಬೈಸಾರಿಗ್– ಸಂಜೆಗೆ, ಹೋಯ್ಕ್– ಹೋಗಬೇಕು, ಬರ್ಕು– ಬರಬೇಕು, ತೊಡು ಆತ್– ಆಸೆ ಆಗುತ್ತೆ, ಗಡ– ಹುಡುಗ, ಹೆಣಾ–ಹುಡುಗಿ, ಕಡ್ಗಿ– ಹಲಸಿನಕಾಯಿ, ಚಣೆಲ– ಅಳಿಲು, ಮರ್ಲ್– ಹುಚ್ಚು ಹೀಗೆ ಈ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಗ್ರಾಂಥಿಕ ಕನ್ನಡಕ್ಕೂ ಕೋಟ ಕುಂದಾಪುರದ ಕನ್ನಡಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಉಡುಪಿ ಜಿಲ್ಲೆಯ ಬೈಂದೂರು ತಾಲೂಕು ಮತ್ತು ಬ್ರಹ್ಮಾವರ ತಾಲೂಕಿನ ವ್ಯಾಪ್ತಿಗೆ ಬರುವ ಎಲ್ಲ ಊರುಗಳಲ್ಲೂ ಮಾತನಾಡುವ ಕನ್ನಡ ಈ ಕುಂದಾಪುರ ಕನ್ನಡ ಅಥವಾ ಕುಂದಗನ್ನಡ. ಈ ಕುಂದಾಪುರದಿಂದ ಕೆಲವೇ ಕಿಲೋಮೀಟರಗಳ ಅಂತರದಲ್ಲಿರುವ ಕೋಟ ಮತ್ತು ಅದರ ಸುತ್ತಮುತ್ತಲಿನ 14 ಗ್ರಾಮಗಳ ಜನರಿಗೆ ಕೋಟದವರು ಅಥವಾ ಕ್ವಾಟದವರು ಎನ್ನುತ್ತಾರೆ. ಖ್ಯಾತ ಸಾಹಿತಿ ಡಾ. ಶಿವರಾಮ ಕಾರಂತರು ಕೂಡ ಕೋಟದವರು. ನನ್ನೂರು ಗುಂಡ್ಮಿ ಕೂಡ ಈ ಹದಿನಾಲ್ಕು ಗ್ರಾಮಗಳಲ್ಲಿ ಒಂದಾದ್ದರಿಂದ 'ನಾವು ಕೋಟದವರು' ಅಂತ ಜನ ನಮ್ಮನ್ನು ಗುರುತಿಸುತ್ತಾರೆ. ಹೀಗಾಗಿ ನಾವು ಕುಂದಾಪುರದವರೂ ಹೌದು, ಕ್ವಾಟದವರೂ ಹೌದು. ಕೋಟದವರು ಆಡುವುದು ಈ ಕುಂದಾಪುರ ಭಾಷೆಯನ್ನೇ. ನಮ್ಮ ಮನೆಭಾಷೆಯೂ ಇದೇ ಕುಂದಗನ್ನಡ. ಕೆಲವರು ಇದನ್ನೇ 'ಕೋಟ ಕನ್ನಡ' ಎನ್ನುತ್ತಾರೆ.

ಕುಂದಾಪ್ರ ಬದಿ ಭಾಷೆ ಎಷ್ಟು ಚಂದ ಇತ್ತೋ ಇಲ್ಲಿನ ಆಚರಣೆಗಳು ಕೂಡ ಅಷ್ಟೇ ವಿಶಿಷ್ಟ. ಇಲ್ಲಿ ದೇವತಾರಾಧನೆಯ ಜೊತೆಜೊತೆಗೆ ನಾಗಾರಾಧನೆ ಮತ್ತು ದೈವಾರಾಧನೆಯೂ ಮಹತ್ವ ಪಡೆದುಕೊಂಡಿದೆ. ಜನರು ತಾವು ನಂಬಿಕೊಂಡು ಬಂದ ನಾಗಬನಕ್ಕೆ ತನು ಹಾಕಿಸಿ ಪೂಜೆ ಸಲ್ಲಿಸುತ್ತಾರೆ. ಆಗಾಗ ಕೆಲವೆಡೆ ನಾಗಮಂಡಲವೂ ವಿಜೃಂಭಣೆಯಿಂದ